ಆ) ಹಾಗಿದ್ದರೆ ಅವುಗಳ ವಿವರಗಳನ್ನು ಒದಗಿಸುವುದು

ಇ) ಬಸವಕಲ್ಯಾಣದ ಅಭಿವೃದ್ಧಿಗೆ ನಿಗಧಿಪಡಿಸಿರುವ ಮೊತ್ತ ;

ಈ) ಬಸವಕಲ್ಯಾಣದಲ್ಲಿ ಪ್ರವಾಸೋದ್ಯಮ ಅಭ್ಯಿದ್ದಿಗಾಗಿ 1994-95ನೇ ಸಾಲಿನಲ್ಲಿ ಸರ್ಕಾರ ಪ್ರವಾಸೋದ್ಯಮ ಅಭಿವೃದ್ದಿ ಕಾರ್ಯಗಳಿಗಾಗಿ ಭಾರತ ಸರ್ಕಾರದ ನೆರವನ್ನು ಕೋರಿದೆಯೇ?

ಉ) ಬಸವಕಲ್ಯಾಣಕ್ಕೆ ಯಾಂತ್ರಿಕ ನಿವಾಸವನ್ನು ಭಾರತ ಸರ್ಕಾರ ಮಂಜೂರು ಮಾಡಿದೆ ಎಂಬುದು ನಿಜವೆ ?

ಊ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ. ಓಂಪ್ರಕಾಶ್ ಕಣಗಲಿ (ಪ್ರವಾಸೋದ್ಯಮ ಹಾಗೂ ಯುವ ಜನ ಸೇವಾ ರಾಜ್ಯ ಸಚಿವರು)

ಅ) ಹೌದು

ಆ) 1994-95ನೇ ಸಾಲಿನಲ್ಲಿ ಕೇಂದ್ರ ಪ್ರವಾಸೋದ್ಯಮ ಸಚಿವಾಲಯವು ಬಸವಕಲ್ಯಾಣದ ಈ ಕೆಳಕಂಡ ಯೋಜನೆಗಳನ್ನು ಆದ್ಯತಾ ಪಟ್ಟಿಯಲ್ಲಿ ಸೇರಿಸಿದೆ.

	ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ)
1) ಪ್ರವಾಸಿ ಸಂಕೀರ್ಣ	30-00
2) ದೃಶ್ಯ ಮತ್ತು ಶ್ರವಣ ಯೋಜನೆ	40-00

ಇ) ಸರ್ಕಾರವು 1994-95ನೇ ಸಾಲಿನ ಆಯವ್ಯಯದಲ್ಲಿ ಪ್ರವಾಸಿ ಸಂಕೀರ್ಣಕ್ಕಾಗಿ ರೂ 15 ಲಕ್ಷ ಹಾಗೂ ದೃಶ್ಯ ಮತ್ತು ಶ್ರವಣ ಯೋಜನೆಗೆ ರೂ. 40 ಲಕ್ಷಗಳನ್ನು ಒದಗಿಸಿದೆ.

ಈ) ಹೌದು.

ಉ) ಇಲ್ಲ.

ಊ) ಉದ್ಭವಿಸುವುದಿಲ್ಲ.

ವಿಷಯ : ರಾಷ್ಟ್ರೀಯ ಹೆದ್ದಾರಿಗಳಲ್ಲಿ ಆಗುತ್ತಿರುವ ಅಪಘಾತಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 454 (132)

ಶ್ರೀ. ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) :- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಹೆದ್ದಾರಿಗಳಲ್ಲಿ (ಪ್ರಮುಖವಾಗಿ ಬೆಂಗಳೂರು - ಪೂನಾ) ನಡೆಯುತ್ತಿರುವ ಅಪಘಾತಗಳ ಬಗ್ಗೆ ಸರ್ಕಾರಕ್ಕೆ ಅರಿವಿದೆಯೆ ?

ಆ) ಇದಕ್ಕೆ ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ ?

ಶ್ರೀ. ಚೌಡರೆಡ್ಡಿ (ಗೃಹ ಸಚಿವರು) :-

ಅ) ಹೌದು.

ಆ) ರಾಷ್ಟ್ರೀಯ ಹೆದ್ದಾರಿಗಳಲ್ಲಿ ಆಗುತ್ತಿರುವ ಅಪಘಾತಗಳನ್ನು ತಡೆಗಟ್ಟಲು ಸರ್ಕಾರ ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

1. ಅತಿ ವೇಗದ ವಾಹನಗಳನ್ನು ತಪಾಸಣೆ ಮಾಡಲಾಗುತ್ತಿದೆ.

2. ಪಾನಮತ್ತ ಚಾಲಕರ ಪತ್ತೆ ಹಚ್ಚಲಾಗುತ್ತಿದೆ.

3. ಅಧಿಕ ಭಾರ ಸರಕುಗಳನ್ನು ಸಾಗಿಸುವ ವಾಹನಗಳ ಪತ್ತೆ ಹಚ್ಚಲಾಗುತ್ತಿದೆ.

4. ರಸ್ತೆಯ ಬದಿಯಲ್ಲಿ ವಾಹನಗಳನ್ನು ನಿಲ್ಲಿಸದಂತೆ ತಡೆಗಟ್ಟಲಾಗಿದೆ.

5. ನಿಧಾನ ಮತ್ತು ವೇಗವಾಗಿ ಚಲಿಸುವ ವಾಹನಗಳಿಗೆ ಪ್ರತ್ಯೇಕವಾಗಿ ಸಂಚಾರ ವ್ಯವಸ್ಥೆ ಮಾಡಲಾಗಿದೆ.

6. ರಾಷ್ಟ್ರೀಯ ಹೆದ್ದಾರಿಯಲ್ಲಿ ಗಸ್ತು ಕಾರ್ಯಚರಣೆಯನ್ನು ತೀವ್ರಗೊಳಿಸಲಾಗಿದೆ.

7. ರಸ್ತೆ ಬದಿಯಲ್ಲಿ ನಾಗರೀಕ ಸೌಲಭ್ಯವನ್ನು ಒದಗಿಸುವುದು ಹಾಗೂ ಅಪಘಾತ ಕ್ಕೊಳಗಾದವರಿಗೆ ವೈದ್ಯಕೀಯ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ.

8. ರಾಷ್ಟ್ರೀಯ ಹೆದ್ದಾರಿಯಲ್ಲಿ ಅಪಘಾತಕ್ಕೊಳಗಾಗಿ ಅಥವಾ ಬ್ರೇಕ್ ವೈಫಲ್ಯದಿಂದ ರಸ್ತೆಯ ಮಧ್ಯದಲ್ಲಿಯೇ ನಿಲ್ಲುವ ವಾಹನಗಳನ್ನು ಕೆಟ್ಟು ತೆಗೆಯುವ ಸಲುವಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಬರುವ ಜಿಲ್ಲೆಗಳಿಗೆ ರೆಕರ್ಸ್ ಒದಗಿಸಲು ಸರ್ಕಾರ ಪರಿಶೀಲಿಸುತ್ತಿದೆ.

9. ಅಪಘಾತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವೈಜ್ಞಾನಿಕ ವಿಧಾನ[illegible]ನ್ನು ಪಾನಮತ್ತ ಚಾಲಕರ ಪತ್ತೆಗಾಗಿ ಆಲ್ಕೋಹಾಲ್ ಸಲಕರಣೆಗಳನ್ನು ಹೆಚ್ಚಿನ ವೇಗವನ್ನು [illegible]ಗುತಿಸಲು ರ್ಯಾದಾರೇಗನ್ ಸಂಚಾರಿ ಮತ್ತು ಜಿಲ್ಲಾ ಪೋಲೀಸರಿಗೆ ಒದಗಿಸಲಾಗಿದೆ.

10. ಪ್ರಮುಖ ಜಿಲ್ಲೆಗಳ ಪೊಲೀಸ್ ಅಧ್ಯಕ್ಷಕರ ಮೇಲ್ವಿಚಾರಣೆಯಲ್ಲಿ ಅಂಬುಲ[illegible] ವಾಹನ ಒದಗಿಸುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ. ಇದರಿಂದ ಅಪಘಾತಕ್ಕೊಳಗಾದ ಗಾಯಾಳುಗಳನ್ನು ಶೀಘ್ರವಾಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂಗಳಿಗೆ ಸಾಗಿಸಲು ಅನುಕೂಲವಾಗುವುದು.

11. ಅಪಘಾತಕ್ಕೊಳಗಾದವರ ಸೌಲಭ್ಯಕ್ಕಾಗಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ ನರ್ಸಿಂಗ್ ಹೋಂ ಮತ್ತು ಟೆಲಿಫೋನ್ ಭೂತ್‌ಗಳನ್ನು ಗುರುತಿಸಲಾಗಿದೆ.

12. ಪ್ರಮುಖ ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ವೈದ್ಯಕೀಯ ಸಂಚಾರಿ ಘಟಕಗಳನ್ನು ಮತ್ತು ತಾಲ್ಲೂಕು ಮತ್ತು ಜಿಲ್ಲಾಕೇಂದ್ರಗಳಲ್ಲಿ ವೈದ್ಯಕೀಯ ಕೇಂದ್ರಗಳನ್ನು (ಟ್ರಾಮಾ ಸೆಂಟರ್ಸ್) ಸ್ಥಾಪಿಸುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ.

Sub : Daily wage workers in all Departments

Un-starred Question No. 456 (710)

Sri. K.S. Eshwarappa (Shimoga):- Will the Chief Minister be pleased to state.

a) Number of daily wage workers in the State in all Departments.

b) Number of workers who fulfilled the terms and conditions to become permanent employees and the action taken by the Govt. to permanent those employees in various departments as per Supreme court decision ?

c) When the process will be completed ?

Sri. M.Veerappa Moily (Chief Mininster):-

a) According to the information available with the Govt. the number of Daily Wage Employees in various departments of the Govt. as on 20-11-90 was 59,797.

b) The supreme Court in its final verdict dtd. 23.2.90, given in writ petition No. 8307-11/83 has directed to regularise the casual : Daily rated employees who have been appointed on or before 1-7-84 and are working in the various departments of State Govt. Accordingly, G.O.N.O. DPAR 2 SLC 90, dtd. 6-8-90 has been issued. As per the said order, such of those employees who have completed 10 years of service as on 31.12.89, shall be absorbed in regular service with retrospective affect from 1-1-